## ನಿಯಮ 72 ರಡಿಯಲ್ಲಿ ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಗೋವಿಂದರಾಜು ರವರ ಗಮನ ಸೆಳೆಯುವ ಸೂಚನೆ

**ವಿಷಯ:**

ರಾಜ್ಯದಲ್ಲಿ ವಿಶೇಷವಾಗಿ ಕೋಲಾರ ಜಿಲ್ಲೆಯಲ್ಲಿ ರೈತರು ಕೋಳಿ ಸಾಕಾಣಿಕೆಯನ್ನು ತಮ್ಮ ಉಪ ಕಸುಬನ್ನಾಗಿ ಮಾಡಿಕೊಂಡಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಕೋಳಿ ಸಾಕಾಣಿಕೆ ಮಾಡಿಕೊಂಡಿದ್ದು, ಕೋಳಿ ಸಾಕಾಣಿಕೆಗೆ ಸಂಬಂಧಿಸಿದ. ಸಮಸ್ಯೆಗಳ ಬಗ್ಗೆ ಜಿಲ್ಲಾಡಳಿತ ಹಾಗೂ ಇಲಾಖೆ ವತಿಯಿಂದ ಯಾವುದೇ ಸೌಲಭ್ಯಗಳನ್ನು ಇತ್ಯರ್ಥಪಡಿಸುವ ವಿಷಯದ ಬಗ್ಗೆ ಮಾನ್ಯ ಪಶುಸಂಗೋಪನಾ ಸಚಿವರ ಗಮನ ಸೆಳೆಯ ಬಯಸುತ್ತೇನೆ.

**ಹೇಳಿಕೆ:**

ರಾಜ್ಯದಲ್ಲಿ ವಿಶೇಷವಾಗಿ ಕೋಲಾರ ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ರೈತರು ಕೋಳಿ ಸಾಕಾಣಿಕೆಯನ್ನು ತಮ್ಮ ಉಪಕಸುಬನ್ನಾಗಿ ಮಾಡಿಕೊಂಡಿರುತ್ತಾರೆ. ಜಿಲ್ಲೆಯಲ್ಲಿ 488 ಬ್ರಾಯ್ಲರ್ (ಮಾಂಸದ) ಕೋಳಿಫಾರಂಗಳು ಹಾಗೂ 123 ಲೇಯರ್ಸ್ (ಮೊಟ್ಟೆ ಇಡುವ) ಕೋಳಿಫಾರಂಗಳು ಇದ್ದು, ಬ್ರಾಯ್ಲರ್ (ಮಾಂಸದ) ಕೋಳಿಫಾರಂಗಳಲ್ಲಿ ಅಂದಾಜು 19,98,140 ಮಾಂಸದ ಕೋಳಿಗಳನ್ನು ಹಾಗೂ ಲೇಯರ್ಸ್ (ಮೊಟ್ಟೆ ಇಡುವ) ಕೋಳಿಫಾರಂಗಳಲ್ಲಿ ಅಂದಾಜು 35,95,200 ಮೊಟ್ಟೆ ಕೋಳಿಗಳನ್ನು ಸಾಕಾಣಿಕೆ ಮಾಡಲಾಗುತ್ತಿದೆ.

ಬ್ರಾಯ್ಲರ್ (ಮಾಂಸದ) ಹಾಗೂ ಲೇಯರ್ಸ್ (ಮೊಟ್ಟೆ ಇಡುವ) ಕೋಳಿಫಾರಂಗಳ ಮಾಲೀಕರು ಕೋಳಿಗಳನ್ನು ಸಾಕಲು ಹಾಗೂ ಮಾರಾಟ ಮಾಡಲು ವಿವಿಧ ಖಾಸಗಿ ಕಂಪೆನಿಗಳೊಂದಿಗೆ (ಸುಗುಣ, ಗೋದ್ರೇಜ್, ವೆಂಕಟೇಶ್ವರ ಹ್ಯಾಚರೀಸ್ ಇತ್ಯಾದಿ) ಗುತ್ತಿಗೆ / ಒಪ್ಪಂದ ಪದ್ಧತಿ (Integration system) ಅನುಸರಿಸಿ ತಮ್ಮ ತಮ್ಮ ಕೋಳಿಫಾರಂಗಳಲ್ಲಿ ಕೋಳಿ ಸಾಕಾಣಿಕೆ ಮಾಡುತ್ತಿದ್ದಾರೆ.

**ಕೋಳಿಸಾಕಾಣಿಕೆಗೆ ಇಲಾಖೆಯಿಂದ ನೀಡಲಾದ ಸೌಲಭ್ಯಗಳು:**

ಇಲಾಖೆಯಿಂದ ಹಿತ್ತಲ ಕೋಳಿ ಸಾಕಾಣಿಕೆಗೆ ಉತ್ತೇಜನ ನೀಡಲು 30 ಜಿಲ್ಲಾ ಪಂಚಾಯತ್ ಸದಸ್ಯರುಗಳ ಕ್ಷೇತ್ರ ವ್ಯಾಪ್ತಿಯಲ್ಲಿನ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಇತರೆ ವರ್ಗದ ಫಲಾನುಭವಿಗಳಿಗೆ ಗಿರಿರಾಜ ಕೋಳಿ ಮರಿಗಳನ್ನು ವಿತರಣೆ ಮಾಡಲಾಗಿದೆ. 2019-20 ಸಾಲಿನಲ್ಲಿ 1250 ಮತ್ತು 2020-21 ನೇ ಸಾಲಿನಲ್ಲಿ 1200 ಫಲಾನುಭವಿಗಳಿಗೆ ಕ್ರಮವಾಗಿ 12,500 ಮತ್ತು 6,000 ಆರು ವಾರಗಳ ಗಿರಿರಾಜ ಕೋಳಿ ಮರಿಗಳನ್ನು ವಿತರಣೆ ಮಾಡಲಾಗಿದೆ.

ಜಿಲ್ಲೆಯ ಎಲ್ಲಾ ಹಿತ್ತಲ ಕೋಳಿಗಳಿಗೆ ಪ್ರತಿ ವರ್ಷ ಎರಡು ಬಾರಿ ಕೊಕ್ಕರೆ ರೋಗದ ವಿರುದ್ಧ ಲಸಿಕೆ ಹಾಕಲಾಗುತ್ತಿದೆ.

ಕೋಲಾರ ಜಿಲ್ಲೆಯಲ್ಲಿ ಒಟ್ಟು 28 ಪ್ರಾಥಮಿಕ ಕುಕ್ಕುಟ ಸಹಕಾರಿ ಸಂಘಗಳಿದ್ದು, ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳದಲ್ಲಿ ಸದಸ್ಯತ್ವವನ್ನು ಹೊಂದಿರುತ್ತವೆ. ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳದ ವತಿಯಿಂದ 2019–20 ನೇ ಸಾಲಿನಲ್ಲಿ ಬಡ ಕುಟುಂಬಗಳ ಆರ್ಥಿಕ ಸಬಲೀಕರಣ ಮತ್ತು ಸಾರ್ವಜನಿಕ ಪೌಷ್ಟಿಕ ಆಹಾರ ಪೂರೈಸುವ ದೃಷ್ಟಿಯಿಂದ ಗ್ರಾಮೀಣ ಪ್ರದೇಶದ 262 ಫಲಾನುಭವಿಗಳಿಗೆ ತಲಾ 38ರಂತೆ ಐದು ವಾರದ ಅಸ್ಸೀಲ್ ಕ್ರಾಸ್/ ನಾಟಿ ಕೋಳಿ ಮರಿಗಳನ್ನು ವಿತರಿಸಲಾಗಿದೆ.

**ಕೋಳಿ ಸಾಕಾಣಿಕೆಗೆ ಸಂಬಂಧಿಸಿದಂತೆ ಉದ್ಭವಿಸಿದ ಸಮಸ್ಯೆಗಳನ್ನು ಇತ್ಯರ್ಥಪಡಿಸಲು ಕೈಗೊಂಡ ಕ್ರಮಗಳು:**

ಇಂಟಿಗ್ರೇಶನ್ ಪದ್ಧತಿ ಕೋಳಿ ಸಾಕಾಣಿಕೆಯಲ್ಲಿ ತೊಡಗಿಸಿಕೊಂಡಿರುವ ರೈತರು ಮತ್ತು ಕಂಪನಿಗಳ ಮಧ್ಯೆ ಇತ್ತೀಚೆಗೆ ಉದ್ಭವಿಸಿರುವ ಬಿಕ್ಕಟ್ಟನ್ನು (ಗ್ರೋಯಿಂಗ್ ಚಾರ್ಜ್, ಎಫ್.ಸಿ.ಆರ್) ಪರಿಹರಿಸುವ ಸಂಬಂಧ ರೈತ ಪ್ರತಿನಿಧಿಗಳು ಹಾಗೂ ಕಂಪನಿ ಪ್ರತಿನಿಧಿಗಳೊಂದಿಗೆ ಸಂಧಾನ ಸಭೆಗಳನ್ನು ನಡೆಸಲಾಗಿದ್ದು, ಮಧ್ಯಂತರ ಪರಿಹಾರವಾಗಿ ದಿನಾಂಕ:01–03–2021ರಿಂದ ಕಂಪನಿಯವರು ಪ್ರತಿ ಕೆ.ಜಿ.ಗೆ ರೂ.6.20 ಕನಿಷ್ಠ ಗ್ರೋಯಿಂಗ್ ಚಾರ್ಜ್ ನೀಡಲು ಒಪ್ಪಿಕೊಂಡಿರುತ್ತಾರೆ.

ಮುಂದುವರೆದು, ಕೋಳಿ ಸಾಕಾಣಿಕೆದಾರರ ಸಮಸ್ಯೆಗಳನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡಿ ಇಂಟಿಗ್ರೇಶನ್ ಪದ್ಧತಿಯಲ್ಲಿ ಕೋಳಿ ಸಾಕಾಣಿಕೆಯಲ್ಲಿ ತೊಡಗಿಸಿಕೊಂಡಿರುವ ರೈತರು ಹಾಗೂ ಕಂಪನಿಯವರ ಸಮಸ್ಯೆಗಳನ್ನು ಪರಿಹರಿಸಲು ಸಮಿತಿಯನ್ನು ರಚಿಸಲು ತೀರ್ಮಾನಿಸಲಾಗಿದೆ.

ಇ–ಪಸಂಮೀ 127 ಸಲೆವಿ 2021

ಪ್ರಭು ಬಿ. ಚವ್ಹಾಣ್
**ಪಶುಸಂಗೋಪನೆ ಸಚಿವರು,**